**CC.No.**164/2023

**ಪಿ ಡಬ್ಲ್ಯೂಃ1**

**ದಿಃ 04-04-2025 ರಂದು ಪಿರ್ಯಾದಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಕೆ ಎಸ್ ಜಿ ಆರೋಪಿ ಪರ ವಕೀಲರಿಂದಃ**

ಪ್ರಕರಣವನ್ನು ಯಾವ ಕಾರಣಕ್ಕಾಗಿ ದಾಖಲಿಸಿದ್ದೇನೆ ಎಂದು ನನಗೆ ಗೊತ್ತು. ಆರೋಪಿ ನನಗೆ 3-4 ವರ್ಷಗಳಿಂದ ಪರಿಚಯ. ಆರೋಪಿ ಮತ್ತು ನನ್ನ ಮಧ್ಯೆ ಆದ ಅಡಿಕೆ ಖೇಣಿ ವ್ಯವಹಾರಕ್ಕೆ ಸಂಬಂಧಿಸಿದಂತೆ ಒಪ್ಪಂದ ಪತ್ರ ಮಾಡಿಕೊಂಡಿದ್ದೇವೆ. ಸದರಿ ಒಪ್ಪಂದ ಪತ್ರವನ್ನು ಹಾಜರುಪಡಿಸಿಲ್ಲ. ಸದರಿ ಒಪ್ಪಂದ ಪತ್ರವನ್ನು ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸ ಾಕ್ಷಿ ಆರೋಪಿ ತನಗೆ ಹಣ ನೀಡಿ ಒಪ್ಪಂದ ಪತ್ರ ತೆಗೆದುಕೊಂಡು ಹೋಗಿದ್ದಾರೆ ಎಂದು ನುಡಿಯುತ್ತಾರೆ. ನಾನು ಹೇಳಿದಂತೆ ನನ್ನ ಮತ್ತು ಆರೋಪಿಯ ಮಧ್ಯೆ ಯಾವುದೇ ಅಡಿಕೆ ಖೇಣಿ ವ್ಯವಹಾರ ಆಗಿಲ್ಲ ಮತ್ತು ಒಪ್ಪಂದ ಪತ್ರ ಸಹ ಆಗಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ನನಗೂ ಪರಿಚಯ ಇಲ್ಲ ಎಂದರೆ ಸರಿಯಲ್ಲ. ನಾನು 8 ಎಕರೆ ಅಡಿಕೆ ತೋಟ ಹೊಂದಿದ್ದೇನೆ. ಸದರಿ ತೋಟದಲ್ಲಿ ಸುಮಾರು 30 ವರ್ಷದ ಅಡಿಕೆ ಗಿಡಗಳು ಇವೆ. ನಾನು ಅಡಿಕೆ ತೋಟದಿಂದ ವಾರ್ಷಿಕ ಸುಮಾರು 50 ಕ್ವಿಂಟಾಲ್ ಒಣ ಅಡಿಕೆ ಬೆಳೆ ಪಡೆಯುತ್ತೇನೆ. ಕಳೆದ 25 ವರ್ಷಗಳಿಂದ ನನಗೆ ಅಡಿಕೆ ತೋಟದಿಂದ ಫಸಲು ಬರುತ್ತಿದೆ. ನಾನು ಬೆಳೆದ ಅಡಿಕೆ ಬೆಳೆಯನ್ನು ನಾನೇ ಖೇಣಿ ಮಾಡಿಲ್ಲ ಬದಲಾಗಿ ಬೇರೆಯವರಿಗೆ ಖೇಣಿಗಾಗಿ ನೀಡುತ್ತೇನೆ.

ಆರೋಪಿಯಿಂದ ನಾನು ರೂ 6,92,640/- ಹಣವನ್ನು ನಗದು ರೂಪದಲ್ಲಿ ಪಡೆದಿದ್ದೆ. ಒಂದು ಕ್ವಿಂಟಾಲ್ ಅಡಿಕೆ ಬೆಳೆಯ ಬೆಲೆ ರೂ 46 ಸಾವಿರ ಆದರೆ ಒಟ್ಟು 49.84 ಕ್ವಿಂಟಾಲ್ ಅಡಿಕೆ ಬೆಳೆಯ ಬೆಲೆ 22,92,824/- ಆಗುತ್ತದೆ ಎಂದರೆ ಸರಿಯಲ್ಲ. ಆರೋಪಿಯೇ ನಿಪಿ 1 ನ್ನು ಬರೆದುಕೊಂಡು ಬಂದು ನನಗೆ ನೀಡಿದ್ದ. ನಿಪಿ 1 ರಲ್ಲಿರುವ ಸಹಿ ಮತ್ತು ಇತರೆ ಬರವಣಿಗೆಗಳಲ್ಲಿ ವ್ಯತ್ಯಾಸ ಇದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ 1 ನ್ನು ನಗದೀಕರಣಕ್ಕಾಗಿ ಸಲ್ಲಿಸಲು ನಾನು ಬ್ಯಾಂಕಿಗೆ ಹೋಗಿಲ್ಲ ಎಂದರೆ ಸರಿಯಲ್ಲ. ನಿಪಿ 3 ರ ಲೀಗಲ್ ನೋಟಸನ್ನು ನಮ್ಮ ವಕೀಲರು ನೀಡಿದ್ದು ಯಾವ ತರಹದ ಅಂಚೆ ಮೂಲಕ ನೀಡಿದ್ದರು ಎಂದು ನನಗೆ ಗೊತ್ತಿಲ್ಲ. ನಾನು ಯಾವುದೇ ನೋಟೀಸನ್ನು ಆರೋಪಿಗೆ ನೀಡಿಲ್ಲ ಮತ್ತು ಆರೋಪಿ ಯಾವುದೇ ನೋಟೀಸ್ ಪಡೆದಿಲ್ಲ ಎಂದರೆ ಸರಿಯಲ್ಲ.

ಆರೋಪಿಯ ತಂದೆ ಕಳೆದ 7-8 ವರ್ಷಗಳಿಂದ ಅನಾರೋಗ್ಯದ ಕಾರಣ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದರೆ ಸರಿ. ಭದ್ರಾವತಿ ತಾಲ್ಲೂಕಿನ ಅರಕೆರೆ ಗ್ರಾಮದ, ಎ ದೇವರಾಜ್ ತಂದೆ ಹರಿಯಪ್ಪ ರವರ ಪರಿಚಯ ಇದೆ. ಆರೋಪಿ ತನ್ನ ತಂದೆಯ ಚಿಕಿತ್ಸೆಗಾಗಿ ಮತ್ತು ತನ್ನ ಅಕ್ಕನ ಮದುವೆಗಾಗಿ ಸದರಿ ಎ ದೇವರಾಜ್ ಬಳಿ ಸಾಲ ಕೇಳಿದ್ದರು ಎಂದರೆ ನನಗೆ ಗೊತ್ತಿಲ್ಲ. ಆರೋಪಿ ದೇವರಾಜ್‌ರವರಿಗೆ ರೂ 20 ಲಕ್ಷ ಸಾಲ ನೀಡಲು ಕೋರಿದ್ದು ಅದಕ್ಕೆ ದೇವರಾಜ್

ರವರು ದಿನಾಂಕ 20.11.2021 ರ ಒಂದು ವಾರಕ್ಕೂ ಮುಂಚೆ ಆರೋಪಿಗೆ ರೂ 10 ಹಣ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ರೂ 10 ಲಕ್ಷ ಹಣಕಾಸಿನ ವ್ಯವಹಾರಕ್ಕೆ ಸಂಬಂಧಿಸಿದಂತೆ ಆರೋಪಿ ನಿಪಿ 1 ರ ಚೆಕ್ಕನ್ನು ದೇವರಾಜ್ರವರಿಗೆ ನೀಡಿದ್ದು, ನನಗೆ ನೀಡಿಲ್ಲ ಎಂದರೆ ಸರಿಯಲ್ಲ.

ದೇವರಾಜ್ ರವರು ನೀಡಿದ್ದ 10 ಲಕ್ಷದ ಸಾಲದ ಭದ್ರತೆಗಾಗಿ ಆರೋಪಿಗೆ ತನ್ನ ಜಮೀನು ಕುರಿತು ಕ್ರಯ ಪತ್ರ ಬರೆದುಕೊಡಲು ಕೇಳಿದ್ದರು ಎಂದರೆ ನನಗೆ ಗೊತ್ತಿಲ್ಲ. ಆರೋಪಿ ತನ್ನ ತಂದೆಯ ಹೆಸರಿಗೆ ಇದ್ದ ಸರ್ವೆ ನಂ 26/2 ಕ್ಷೇತ್ರ 1 ಎಕರೆ 35 ಗುಂಟೆ ಅಡಿಕೆ ಜಮೀನನ್ನು ದೇವರಾಜ್ ರವರಿಗೆ ಕ್ರಯ ಕರಾರು ಪತ್ರ ಬರೆದುಕೊಡಲು ಒಪ್ಪಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ದೇವರಾಜ್ ರವರಿಗೆ ಆರೋಪಿ ಕ್ರಯ ಕರಾರು ಪತ್ರ ಬರೆದುಕೊಡಲು ಬಂದಾಗ ಸದರಿ ದೇವರಾಜ್ ರವರು ನನಗೆ ಕ್ರಯ ಪತ್ರ ಬರೆದುಕೊಡುತ್ತಾರೆ ಎಂಬ ವಿಷಯ ಆರೋಪಿಗೆ ಮೊದಲ ಬಾರಿಗೆ ಗೊತ್ತಾಗಿತ್ತು ಎಂದರೆ ಸರಿಯಲ್ಲ. ಆರೋಪಿ ದೇವರಾಜ್ ರವರಿಗೆ ಕ್ರಯ ಕರಾರುಪತ್ರ ಬರೆದುಕೊಡುವ ಕಾಲಕ್ಕೆ ದೇವರಾಜ್ ರವರು ಆರೋಪಿಗೆ ರೂ 7 ಲಕ್ಷ ಹಣ ನೀಡಿದ್ದರು ಎಂದರೆ ಸರಿಯಲ್ಲ. ಉಳಿದ ರೂ 3,63,000/- ಹಣವನ್ನು 35 ತಿಂಗಳ ಒಳಗಾಗಿ ನೀಡಿ ಕ್ರಯ ಪತ್ರ ಬರೆದುಕೊಡುತ್ತೇನೆ ಎಂದು ನನ್ನ ಮತ್ತು ಆರೋಪಿಯೇ ಮಧ್ಯೆ ಕ್ರಯ ಕರಾರು ಪತ್ರ ಆಗಿತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಕ್ರಯ ಕರಾರು ಪತ್ರಕ್ಕೂ ದೇವರಾಜ್ ರವರಿಗೆ ಯಾವುದೇ ಸಂಬಂಧ ಇಲ್ಲ ಎಂದು ನುಡಿಯುತ್ತಾರೆ. ಸದರಿ ಕ್ರಯ ಕರಾರುಪತ್ರಕ್ಕೆ ದೇವರಾಜ್ ರವರು ಸಾಕ್ಷಿದಾರ ಎಂದು ಸಹಿ ಮಾಡಿದ್ದಾರೆ. ಕ್ರಯ ಕರಾರು ಪತ್ರ ಬರೆದುಕೊಡುವ ಕಾಲಕ್ಕೆ ಜಮೀನು ಆಸ್ತಿಯು ಆರೋಪಿಯ ತಂದೆಯ ಹೆಸರಿಗೆ ಇದ್ದ ಕಾರಣ ಸದರಿ ಕರಾರುಪತ್ರವನ್ನು ಆರೋಪಿ, ಆರೋಪಿಯ ತಂದೆ, ತಾಯಿ ಮತ್ತು ಅಕ್ಕ ಜಂಟಿಯಾಗಿ ಬರೆದುಕೊಟ್ಟಿದ್ದರು ಎಂದರೆ ಸರಿ.

ಸದರಿ 35 ತಿಂಗಳ ಅವಧಿಯ ಒಳಗೆ ನಾನು ಆರೋಪಿಯ ವಿರುದ್ದ ಹೊಳೆ ಹೊನ್ನೂರು ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದೆ ಎಂದರೆ ಸರಿ. ಸದರಿ ದೂರಿಗೆ ಸಂಬಂಧಿಸಿದಂತೆ ನನ್ನ, ಆರೋಪಿ ಮತ್ತು ಆತನ ಚಿಕ್ಕಪ್ಪ ಸಂಪತ್ ಕುಮಾರ್ ರವರರೊಂದಿಗೆ ದಿನಾಂಕ 16.03.2024 ರಂದು ಒಂದು ಒಪ್ಪಂದ ಪತ್ರ ಮಾಡಿಕೊಂಡಿದ್ದೆವು ಎಂದರೆ ಸರಿ.

ಸದರಿ ಒಪ್ಪಂದ ಪತ್ರದಂತೆ ಕರಾರುಪತ್ರದನ್ವಯ ನನಗೆ ಜಮೀನು ಬೇಡ ಬದಲಾಗಿ ಹಣ ನೀಡುತ್ತೇವೆ ಎಂದದು ಆರೋಪಿ ಮತ್ತು ಆರೋಪಿಯ ತಂದೆ ಒಪ್ಪಿಕೆಪೊಂಡು ರೂ 20 ಲಕ್ಷ ನೀಡಲು ಒಪ್ಪಿಕೊಂಡಿದ್ದು ಆ ಪೈಕಿ 2 ಕಂತಿನಲ್ಲಿ ಆರೋಪಿ ನನಗೆ ಒಪ್ಪಿಕೊಂಡ ರೂ 20 ಲಕ್ಷ ಹಣವನ್ನು ಮರಳಿಸಿದ್ದಾರೆ. 16.03.2024 ರಂದು ಜಮೀನು ಕ್ರಯದ ವಿಚಾರವಾಗಿ ನನಗೆ ರೂ 10 ಲಕ್ಷ ಹಣ ನೀಡಿದ್ದ ಎಂದರೆ ಸರಿ. ದಿನಾಂಕ 22.07.2024 ರಂದು ಆರೋಪಿ

ಉಳಿದ ರೂ 10 ಲಕ್ಷ ಹಣ ನೀಡಿದ್ದ ಕಾರಣ ನಾನು ಕ್ರಯ ಕರಾರು ರದ್ದತಿ ಪತ್ರವನ್ನು ಬರೆದುಕೊಟ್ಟಿದ್ದೆ ಎಂದರೆ ಸರಿ.

ಆರೋಪಿ ಮತ್ತು ದೇವರಾಜ್ ರವರು ವಿಶ್ವಾಸದಿಂದ ಇದ್ದ ಕಾರಣ ದೇವರಾಜ್ ರವರು ನಿಪಿ 1 ರ ಚೆಕ್ಕನ್ನು ಆರೋಪಿಗೆ ಮರಳಿಸುತ್ತೇನೆ ಎಂದು ಹೇಳಿದ್ದ ಎಂದರೆ ಸರಿಯಲ್ಲ. ಪ್ರಸ್ತುತ ಪ್ರಕರಣದ ವಿಷಯ ಆರೋಪಿಗೆ ಗೊತ್ತಿರಲಿಲ್ಲ ಎಂದರೆ ಸರಿಯಲ್ಲ. ನನಗೆ ಬರಬೇಕಾದ ಎಲ್ಲಾ ಹಣ ಬಂದಿದ್ದರು ಸಹ ಆರೋಪಿಗೆ ತೊಂದರೆ ನೀಡುವ ಕಾರಣ ನಿಪಿ 1 ರ ಚೆಕ್ಕನ್ನು ನಾನೇ ಬರೆದುಕೊಂಡು ಪ್ರಸ್ತುತ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನನಗೂ ಮತ್ತು ಆರೋಪಿಗೂ ಸಂಬಂಧ ಸರಿ ಇರದೇ ಇದ್ದ ಕಾರಣ ಮತ್ತು ನನಗೆ ಆರೋಪಿ ಕ್ರಯ ಕರಾರು ಪತ್ರ ಬರೆದುಕೊಟ್ಟ ಕಾರಣ ಮತ್ತು ಅರೋಪಿ ನನ್ನೊಂದಿಗೆ ಖೇಣಿ ಮಾಡುವ ಸಂದರ್ಭ ಬಂದಿಲ್ಲ ಎಂದರೆ ಸರಿಯಲ್ಲ.

ಆರೋಪಿಯು ಸಹ ಅಡಿಕೆ ತೋಟ ಹೊಂದಿದ್ದು ಮತ್ತು ಬೆಳೆದ ಅಡಿಕೆ ಬೆಳೆಯನ್ನು ಬೇರೆಯವರಿಗೆ ಖೇಣಿ ಮಾಡಲು ನೀಡುತ್ತಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಪಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.